ವಿತಕ್ಕೆ ಮಂಚ್ಚಿದ್ದೀರಿ, ಅಲ್ಲಿಯ ವಂಕ್ಕಳು ವಿದ್ಯಾಭ್ಯಾಸ ಮಾಡಬಾರದೇ ? ಇದರ ಬಗ್ಗೆ ನಾನು ಚೀಫ್ ಮಿನಿಸ್ಟರ್‌ಗೂ ಕಾಗದ ಬರೆದಿರುತ್ತೇನೆ. ನಿವಂಗೆ ಮಾಹಿತಿ ದೊರಕದೇ ಇದ್ದರೆ ತರಿಸಿಕೊಂಡು ಅಲ್ಲಿನ ವಂಕ್ಕಳಿಗೆ ಅನುಕೂಲ ಮಾಡಿಕೊಡಿ. ಮಾಹಿತಿ ಇಲ್ಲ ಎಂದು ಕಾಣುತ್ತದೆ, ಅದಕ್ಕೆ ಬೇರೆ ಕಡೆ ಎಲ್ಲೂ ಮುಚ್ಚಿಲ್ಲ ಎಂದು ಹೇಳಿದ್ದೀರಿ. ಅಲ್ಲಿಗೆ ನಾನು ಹೋಗಿದ್ದಾಗ ಎಲ್ಲಾ ಹುಡುಗರೂ ಬಂದು ನನ್ನನ್ನು ಮಂತ್ರಿಕೊಂಡರು. ದಯವಿಟ್ಟು ಅದರ ಬಗ್ಗೆ ಮಾಹಿತಿ ತರಿಸಿಕೊಂಡು ಅದನ್ನು ಪ್ರಾರಂಭಿಸುವುದಕ್ಕೆ ಕ್ರಮ ತೆಗೆದುಕೊಳ್ಳಿ. ಅಲ್ಲಿ ಇರುವುದು ಒಂದೇ ಒಂದು ಕಾಲೇಜು.

ಶ್ರೀ ಬಿ. ಸೋಮಶೇಖರ್.—ಮಾನ್ಯ ಅಧ್ಯಕ್ಷರೇ, ಜೂನಿಯರ್ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ೧೦ ಕ್ಕಿಂತ ಕಡಿಮೆ ಇದ್ದರೆ ಮುಚ್ಚಬೇಕೆಂದು ತೀರ್ಮಾನ ತೆಗೆದು ಕೊಂಡಿದ್ದೇವೆ. ೧೦ ಕ್ಕಿಂತ ಹೆಚ್ಚು ಸಂಖ್ಯೆ ಇದ್ದೂ ಅದನ್ನು ಮುಚ್ಚಿದ್ದರೆ, ಅದರ ಬಗ್ಗೆ ಮಾಹಿತಿ ತರಿಸಿಕೊಂಡು ಕ್ರಮ ತೆಗೆದು ಕೊಳ್ಳುತ್ತೇನೆ.

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೇ, ನನ್ನ ಕ್ಷೇತ್ರದ ಕಿಬ್ಬನಹಳ್ಳಿ ಹೋಬಳಿ.....

ಅಧ್ಯಕ್ಷರು.—ಕ್ವೆಶ್ಚನ್ ಅವರ್ ಮುಗಿದು ಹೋಯಿತು. ನಾನು ಅವಕಾಶ ಕೊಡುವುದಿಲ್ಲ. I have not permitted you. It will not be recorded.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೪೫೫

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಮಾನ್ಯ ಸದಸ್ಯರ ಗೈರುಹಾಜರಿ

ಶಹಾಪುರ ಉಪ ಕಾಲುವೆಯ ಬಗ್ಗೆ

೬೪೭. ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್).—ಮಾನ್ಯ ಲೋಕೋಪಯೋಗಿ ಕಾಡಾ ಮಂತ್ರಿ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಹಾಪುರ ಉಪ ಕಾಲುವೆಯಲ್ಲಿ ಬಿರುಕು ಬಿಟ್ಟು ಒಡೆದಿದ್ದು ನಿಜವೇ ?

ಆ) ಹಾಗಿದ್ದಲ್ಲಿ, ಈ ಬಿರುಕಿನಿಂದ ಆದ ಒಟ್ಟು ಹಾನಿ ಎಷ್ಟು ?

ಇ) ಈ ಕಾಮಗಾರಿಯನ್ನು ಗುತ್ತಿಗೆದಾರರಿಂದ ಮಾಡಿಸಿಕೊಳ್ಳಲಾಗಿದೆಯೆ, ಅಥವಾ ಇಲಾಖಾ ವತಿಯಿಂದ ಮಾಡಲಾಗಿದೆಯೇ ?

ಈ) ಕಾಮಗಾರಿಯನ್ನು ಇಲಾಖಾ ವತಿಯಿಂದ ಮಾಡಿದ್ದಾರೆ, ಈ ಕಳಪೆ ಕೆಲಸಕ್ಕೆ ಜವಾಬ್ದಾರರಾಗಿರುವ ಅಧಿಕಾರಿಗಳು ಯಾರು, ಮತ್ತು ಅವರ ವಿರುದ್ಧ ಸರ್ಕಾರವು ಕೈಗೊಂಡ ಕ್ರಮವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಸಚಿವರು).—

ಅ) ಹೌದು.

ಆ) ಒಡೆದ ಬಾಗವನ್ನು ಮುಚ್ಚಲು ತಗಲಿದ ವೆಚ್ಚ ೨೭,೨೪೮ ರೂ.ಗಳು

ಇ) ಈ ಭಾಗದ ಕಾಲುವೆ ಕೆಲಸವನ್ನು ಗುತ್ತಿಗೆದಾರರ ಮುಖಾಂತರ ಮಾಡಿಸಲಾಗಿದೆ.

ಈ) ಉದ್ಭವಿಸುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಆಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನಲ್ಲಿ ಬರತಕ್ಕಂಥ ಶಹಾಪುರ ಬ್ರಾಂಚ್ ಕೆನಾಲ್ ಏನಿದೆ ಅದು ಬ್ರೀಚ್‌ಆಗಿ ಸುಮಾರು ೨೭ ಸಾವಿರದ ೨೪೮ ರೂಪಾಯಿಗಳು ರಿಪೇರಿಗೆ ಖರ್ಚಾಯಿತು. ಆದರೆ ಬ್ರೀಚ್ ಆಗಿರುವುದರಿಂದ ನೂರಾರು ಜನ ರೈತರ ಬೆಳೆ ಹಾಳಾಯಿತು. ಬ್ರೀಚ್ ಆದಮೇಲೆ ಕೆಳಗಡೆ ಇದ್ದ ಭೂಮಿಯನ್ನು ಹಾಗೂ ಬೆಳೆಯನ್ನು ನೀರು ಕೊಚ್ಚಿಕೊಂಡು ಹೋಗಿದೆ. ಇದಕ್ಕೆ ರೈತರಿಗೆ ಏನಾದರೂ ಕಂಪೆನ್‌ಸೇಷನ್ ಕೊಡುವುದಕ್ಕೆ ಪರಿಶೀಲನೆ ಮಾಡುತ್ತೀರಾ ? ತಪ್ಪು ಅಧಿಕಾರಿಗಳನ್ನು ಕಳುಹಿಸಿ ಎಷ್ಟು ರೈತರು ಕೆನಾಲ್ ಬ್ರೀಚ್‌ನಿಂದ ಹಾನಿಗೆ ಒಳಗಾಗಿದ್ದಾರೆ ಎಂಬುದನ್ನು ಪರಿಶೀಲಿಸುತ್ತೀರಾ ? ದಿಸ್ ಈಸ್ ದಿ ಬಿಗ್ಗೆಸ್ಟ್ ಕೆನಾಲ್. ಈ ಶಹಾಪುರ ಬ್ರಾಂಚ್ ಕೆನಾಲ್ ಏನಿದೆ ಇದೇ ಮೇನ್ ಕೆನಾಲ್. ಇದು ಬ್ರೀಚ್ ಆಗಿದೆ. ಇದರಿಂದ ನೂರಾರು

ರೈತರ ಬೆಳೆಗಳು ಹಾಳಾಗಿದೆ. ಇದಕ್ಕೆ ಕಂಪೆನ್‌ಸೇಷನ್ ಕೊಡುವುದಕ್ಕೆ ಯಾವುದಾದರೂ ಕ್ರಮ ತೆಗೆದುಕೊಳ್ಳುತ್ತೀರಾ ಎಂಬುದು ಮೊದಲನೆಯದು. ಇನ್ನು ಎರಡನೆಯದಾಗಿ, ಇಂತಹ ಡಿಫೆಕ್ಟೀವ್ ವರ್ಕ್ಸ್ ಮಾಡುವುದಕ್ಕೆ ಯಾವ ಯಾವ ಕಂಟ್ರಾಕ್ಟರ್ಸ್ ಕಾರಣ. ಇದನ್ನು ತಾವು ತಮ್ಮ ಡಿಪಾರ್ಟ್‌ಮೆಂಟ್ ನಿಂದ ಎಕ್ಸಿಕ್ಯೂಟ್ ಮಾಡಿಲ್ಲ ಎಂದು ಹೇಳಿದ್ದೀರಿ. ಒಂದು ವೇಳೆ ಕಂಟ್ರಾಕ್ಟ್ ಮೂಲಕ ಮಾಡಿಸಿದ್ದರೆ, ಯಾವ ಕಂಟ್ರಾಕ್ಟರ್ಸ್ ಇದಕ್ಕೆ ಕಾರಣ ? ಇವತ್ತಿನ ದಿವಸ ಅವರಿಂದ ಹಣವನ್ನು ರಿಕವರಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ, ಹೇಗೆ ?

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ, ಇದು ಡಿಫೆಕ್ಟೀವ್ ವರ್ಕ್ ಅಲ್ಲ. ಬ್ರೀಚ್ ಆದ ತಕ್ಷಣ ನಾನು ಆ ಸ್ಥಳಕ್ಕೆ ಹೋಗಿ ನೋಡಿದ್ದೇನೆ. ಅಲ್ಲಿ ಏನಾಗಿದೆ ಎಂದರೆ, ಈ ಎನ್.ಎಲ್.ಬಿ.ಸಿ.ಯ ಶಹಾಪುರ ಬ್ರಾಂಚ್ ಕೆನಾಲ್‌ನಲ್ಲಿ ೩೪೦೦ ಕ್ಯೂಸೆಕ್ಸ್ ನೀರನ್ನು ತೆಗೆದುಕೊಂಡು ಹೋಗುವುದಕ್ಕೆ ಮಾತ್ರ ಅದನ್ನು ಡಿಸೈನ್ ಮಾಡಲಾಗಿದೆ. ಯಾವ ಪಾಯಿಂಟ್‌ನಲ್ಲಿ ಬ್ರೀಚ್ ಆಗಿದೆ ಅಲ್ಲಿ ಒಂದು ಕಂಟ್ರೋಲಿಂಗ್ ವಾಲ್ವ್ ಹಾಕುವುದಕ್ಕೆ ಅರೇಂಜ್‌ಮೆಂಟ್ ಮಾಡಬೇಕೆಂದು ಹೇಳಿ ಕೆಲಸ ನಡೆಯುತ್ತಿತ್ತು. ಆ ಪರ್ಟಿಕ್ಯುಲರ್ ಪಾಯಿಂಟ್‌ನಲ್ಲಿ ಈ ಕೆಲಸ ಮಾಡುವುದಕ್ಕೋಸ್ಕರ ಮೂರು ನಾಲ್ಕು ಹ್ಯೂಮ್ ಪೈಪ್ಸ್ ಹಾಕಿ ನೀರನ್ನು ಕೊಡತಕ್ಕ ಕೆಲಸ ನಡೆಯುತ್ತಿತ್ತು. ಈ ಕಡೆ ಕೆಲಸ ನಡೆಯಬೇಕಾದರೆ, ನೀರನ್ನೂ ಹಾಗೇ ತೆಗೆದುಕೊಂಡು ಹೋಗಬೇಕೆಂದು ಹ್ಯೂಮ್ ಪೈಪ್ಸ್ ಹಾಕಿ ವ್ಯವಸ್ಥೆ ಮಾಡಿರುತ್ತೇನೆ. ಇದು ಟೆಂಪೊರರಿ ಅರೇಂಜ್‌ಮೆಂಟ್. ಏನಾಗಿದೆ ಎಂದರೆ ಫಸ್ಟ್ ಪಾಯಿಂಟ್‌ನಲ್ಲಿ ನೀರನ್ನು ಬಿಡುವಾಗ ಹೆಚ್ಚು ನೀರನ್ನು ಬಿಟ್ಟಿದ್ದರಿಂದ ಆ ನೀರು ಈ ಮೂರು ಸಣ್ಣ ಸಣ್ಣ ಹ್ಯೂಮ್ ಪೈಪ್ಸ್‌ನಲ್ಲಿ ಪಾಸಾಗುವುದಕ್ಕೆ ಸಾಧ್ಯವಾಗಲಿಲ್ಲ. ನೀರಿನ ಮಟ್ಟ ಏರಿತು. ಆದರೆ ಕೆನಾಲ್ ಒಡೆದಿಲ್ಲ, ಕೆನಾಲ್ ಪಕ್ಕ ಎಡಬಾಗದಲ್ಲಿ ಒಂದು ಸಣ್ಣ ಎಂಬ್ಯಾಂಕ್‌ಮೆಂಟ್ ಕಟ್ಟಿದ್ದರು, ಅದು ಒಡೆದು ಹೋಯಿತು.

ಎಡಭಾಗದಲ್ಲಿ ನೀರನ್ನು ತಡೆಗಟ್ಟಿದ್ದಾರೆ. ನಾನು ಮಿಂದ್ದಾಗಿ ಸ್ಥಳಕ್ಕೆ ಹೋಗಿ ಸ್ಥಳ ಪರಿಶೀಲನೆಯನ್ನು ಮಾಡಿಕೊಂಡು ಬಂದಿದ್ದೇನೆ. ಅಧಿಕಾರಿಗಳ ಕರ್ತವ್ಯ ಲೋಪದಿಂದ ಈ ತೊಂದರೆಯಾಗಿದೆ, ಆದ್ದರಿಂದ ಈ ಬಗ್ಗೆ ವಿಚಾರಣೆ ಮಾಡಿ ಎಂದು ನಾನು ಮೇಲಾಧಿಕಾರಿಗಳಿಗೆ ತಿಳಿಸಿದ್ದೇನೆ. ಇನ್ನು ಮುಂದೆ ಈ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳುವ ಸಲುವಾಗಿ ಟೆಲಿಕಮ್ಯೂನಿಕೇಷನ್ ಸಿಸ್ಟಂ ಅನ್ನು ಅಳವಡಿಸಿಕೊಳ್ಳಿ ಎಂದೂ ಸಹ ತಿಳಿಸಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ರೈತರ ಬಗ್ಗೆ ಏನೂ ಹೇಳಲಿಲ್ಲ ?

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಸ್ಥಳ ಪರಿಶೀಲನೆ ಮಾಡಿಕೊಂಡು ಬಂದಿದ್ದೇನೆ. ಅಲ್ಲಿ ೩-೪ ಎಕರೆ ಜಮೀನಿನ ಮೇಲೆ ಸ್ವಲ್ಪ ಮಣ್ಣು ಮಾತ್ರ ಬಿದ್ದಿದೆ. ಅದನ್ನು ತಾವೇ ತೆಗೆದುಕೊಳ್ಳಿ ಎಂದು ಹೇಳಿದ್ದೇನೆ. ಮೂರು ಸಣ್ಣ ಪೈಪ್‌ಗಳಲ್ಲಿ ೩೦೦ ಕ್ಯೂಸೆಕ್ಸ್ ನೀರನ್ನು ಮಾತ್ರ ಬಿಡಬೇಕಾಗಿತ್ತು. ಆದರೆ ಅದಕ್ಕಿಂತ ಜಾಸ್ತಿ ಬಿಟ್ಟಿದ್ದರಿಂದ ಆ ರೀತಿ ಆಯಿತು.

ಶ್ರೀ ಎನ್. ಧರ್ಮಸಿಂಗ್.—ಮಾನ್ಯ ಮಂತ್ರಿಗಳು ಹೋಗಿ ಸ್ಥಳ ಪರಿಶೀಲನೆ ಮಾಡಿಕೊಂಡು ಬಂದಿದ್ದಾರೆ. ಮತ್ತು ಕಾಡ ಅಧ್ಯಕ್ಷರು ಸಹ ಈ ಬಗ್ಗೆ ತಮಗೆ ಪತ್ರ ಬರೆದಿದ್ದಾರೆ. ಇದು ಅಧಿಕಾರಿಗಳ ಕರ್ತವ್ಯ ಲೋಪದಿಂದ ಮತ್ತು ಗುತ್ತಿಗೆದಾರರ ಕರ್ತವ್ಯ ಲೋಪದಿಂದ ಆಗಿರತಕ್ಕಂಥ ಕೆಲಸ. ಈ ಬಗ್ಗೆ ಸರ್ಕಾರ ಇದುವರೆವಿಗೂ ಏನೇನು ಕ್ರಮ ತೆಗೆದುಕೊಂಡಿಲ್ಲ, ಇದಕ್ಕೆ ಕಾರಣವೇನು ?

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಮೊದಲೇ ಹೇಳಿದ್ದೇನೆ. ಈ ಕೆಲಸ ಅಧಿಕಾರಿಗಳ ಅಲಸ್ಯದಿಂದ ಆಗಿರತಕ್ಕಂಥ ಕೆಲಸ. ಈ ಬಗ್ಗೆ ವಿಚಾರಣೆ ಮಾಡಿ ಎಂದೂ ಸಹ ಹೇಳಿದ್ದೇನೆ, ವಿಚಾರಣೆಯಾಗಿ ವರದಿ ಬಂದ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.